ಪ್ರಕಾಶರು ಬಹಳ ಗಂಭೀರವಾಗಿ ಸ್ವೀಕರಿಸಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದರು. ಶೌಚಾಲಯ ನಿರ್ಮಾಣಕ್ಕೆ ಹಲವು ಊರುಗಳಲ್ಲಿ ಅವಕಾಶ ಆಯಿತು. ಆದರೆ ಗ್ರಂಥಾಲಯಗಳು ಆ ಮಟ್ಟಿಗೆ ಆಗಲಿಲ್ಲ. ಆದರೆ ಮುಂದೆ ಎಚ್.ಡಿ. ಕುಮಾರಸ್ವಾಮಿಯವರ ಸರ್ಕಾರ ಬಂದಾಗ ಸಚಿವರಾಗಿದ್ದ ಬಸವರಾಜ ಹೊರಟ್ಟಿಯವರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದರಿಂದ ರಾಜ್ಯದಲ್ಲಿ 5,700 ಗ್ರಾಮಪಂಚಾಯ್ತಿ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದವು. ಆಗ ಶೆಟ್ಟರ್ ಅವರು ಗ್ರಂಥಾಲಯ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ತಮ್ಮ ಇಲಾಖೆಯಿಂದ ಒಂದು ಕಾರ್ಯಕ್ರಮ ಮಾಡಿ ನನ್ನನ್ನು ಕರೆದು, 'ಊರಿಗೊಂದು ಗ್ರಂಥಾಲಯ' ಪರಿಕಲ್ಪನೆಯನ್ನು ಕೊಟ್ಟವರು ನೀವು; ಈಗ ಅದರ ಆಧಾರದ ಮೇಲೆ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದಿವೆ; ನೀವು ಬೇರೆಲ್ಲ ಸನ್ಮಾನಕ್ಕೆ ಒಪ್ಪಲ್ಲ ಎಂದು ಗೊತ್ತು; ಅದಕ್ಕೆ ನಿಮಗೆ ಒಪ್ಪಿಗೆಯಾಗೋ ಸನ್ಮಾನ ಇಟ್ಟುಕೊಂಡಿದೀವಿ ಎಂದು ಹೇಳಿ ಬಹು ಅಮೂಲ್ಯವಾದ ಹಲವು ಪುಸ್ತಕಗಳ ಕಟ್ಟೊಂದನ್ನು ನನಗೆ ನೀಡಿ ಸನ್ಮಾನ ಮಾಡಿದ್ದರು. ನನಗೆ ನಿಜಕ್ಕೂ ನಮ್ಮ ನಡುವಿನ ಬಹುದೊಡ್ಡ ವಿದ್ವಾಂಸರಾದ ಶೆಟ್ಟರ್ ಕೈಯಿಂದ ಮಾಡಿಸಿಕೊಂಡ ಪುಸ್ತಕ ಸನ್ಮಾನ ಬಹಳ ಸಂಭ್ರಮ ನೀಡಿತು.

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಸಿಗಲು ಬೇರೆಬೇರೆಯವರು ಕಾರಣ ಇರಬಹುದು. ಆದರೆ ನನ್ನ ಪ್ರಕಾರ, ಮತ್ತು ನಾನು ಕೇಳಿರುವುದರ ಪ್ರಕಾರ ಶೆಟ್ಟರ್ ಅವರ 'ಶಂಗಂ ತಮಿಳಗಂ' ಕೃತಿಯ ದಾಖಲಾತಿ ಏನಿದೆ, ಅದೇ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರಕಲು ಮೂಲ ಕಾರಣ ಮತ್ತು ಪ್ರೇರಣೆ. ಆ ದಾಖಲಾತಿ ಇಲ್ಲದಿದ್ದರೆ ಅದು ಸಾಧ್ಯವಾಗುತ್ತಿರಲಿಲ್ಲ. ನಾನು ಹಲವು ಸಭೆಗಳಲ್ಲಿ ಶೆಟ್ಟರ್ ಬಗ್ಗೆ ಮಾತಾಡಿದಾಗ ಬಹುತೇಕರು ರಾಜಕಾರಣಿ ಜಗದೀಶ ಶೆಟ್ಟರ್ ಅವರ ಬಗ್ಗೆ ಮಾತಾಡ್ತಿದೀನಿ ಎಂದು ತಪ್ಪು ತಿಳಿದುಕೊಂಡಿದ್ದು ಇದೆ; ಜನರಿಗೆ ರಾಜಕಾರಣಿಗಳ ಬಗ್ಗೆ ಮಾಹಿತಿ ಇರುವಷ್ಟು ಇಂಥ ದೊಡ್ಡ ಇತಿಹಾಸ ತಜ್ಞರ ಬಗ್ಗೆ ಇಲ್ಲವಲ್ಲ ಅಂತ ಬಹಳ ಬೇಸರ ಆಗ್ತಿತ್ತು.

ಶೆಟ್ಟರ್ ಅವರಿಗೆ ಹಲವು ಪ್ರಶಸ್ತಿ ಪುರಸ್ಕಾರಗಳು ದೊರಕಿದಾಗ ಶ್ರೀದೇವಿಗೆ ಹೇಳಿ ಫೋನ್ ಮಾಡಿಸಿ ಅಭಿನಂದನೆ ಸಲ್ಲಿಸುವುದು, ಅವರಿಗೆ ಪತ್ರ ಬರೆದು ಅಭಿನಂದನೆ ತಿಳಿಸುವುದು ಮಾಡುತ್ತಿದ್ದೆ. ಆಗೆಲ್ಲ ಅವರು ಬಹಳ ಸಂತೋಷಪಡುತ್ತಿದ್ದರು. ಈಗ ಶೆಟ್ಟರ್ ಅವರು ಹೇಳದೆ ಕೇಳದೆ ಅಚಾನಕ್ ಆಗಿ ನಮ್ಮನ್ನೆಲ್ಲ ಬಿಟ್ಟು ಅಗಲಿದ್ದಾರೆ. ನನ್ನ ಸ್ನೇಹಿತರೆಲ್ಲ ಒಬ್ಬೊಬ್ಬರಾಗಿ ಇಲ್ಲಿಂದ ತೆರಳ್ತಾ ಇದ್ದಾರೆ... ಈಗ ಶೆಟ್ಟರ್ ಅವರು ಆ ಸ್ನೇಹಿತರ ದಾರಿ ಹಿಡಿದರು; ನನ್ನ ದುಃಖದ ಪ್ರಮಾಣ ಏರುತ್ತಲೇ ಇದೆ... ಆದರೆ, ಎಲ್ಲರೂ ಒಂದಲ್ಲ ಒಂದು ದಿನ ಇಲ್ಲಿಂದ ತೆರಳಲೇ ಬೇಕಲ್ಲ...

### ಕಡಿದಾಳು ಶಾಮಣ್ಣ

ರೈತ ಮುಖಂಡ, ಗಾಂಧೀವಾದಿ ಕಡಿದಾಳು ಶಾಮಣ್ಣ ಅವರ ಹುಟ್ಟೂರು ಮಲೆನಾಡಿನ ಕಡಿದಾಳು ಎಂಬ ಹಳ್ಳಿ. ಅರೆ ಬಯಲುಸೀಮೆಯ ಭಗವತಿಕೆರೆ ಎಂಬ ಹಳ್ಳಿ ಅವರ ಕರ್ಮಭೂಮಿ. ಕಡಿದಾಳು ಶಾಮಣ್ಣ ಅವರ ಜೀವನ ಚಿತ್ರಣವನ್ನು ಒಳಗೊಂಡ 'ಕಾಡ ತೊರೆಯ ಜಾಡು' ಪುಸ್ತಕವನ್ನು ಲೇಖಕಿ ಅಕ್ಷತಾ ನಿರೂಪಿಸಿ ಸಂಗ್ರಹಿಸಿದ್ದಾರೆ.

### ಅಕ್ಷತಾ ಹುಂಚದಕಟ್ಟೆ

ಪ್ರಕಾಶನ, ಕವಿತೆ, ಹೋರಾಟಗಳಲ್ಲಿ ತಮ್ಮನ್ನು ಅನುದಿನವೂ ತೊಡಗಿಸಿಕೊಂಡಿರುವ ಅಕ್ಷತಾ, ತೀರ್ಥಹಳ್ಳಿ ತಾಲ್ಲೂಕಿನ ಹುಂಚದಕಟ್ಟೆಯವರು. 'ರೆಕ್ಕೆ ಬಿಚ್ಚಿ ಆಕಾಶ ನೆಚ್ಚಿ', 'ನೀರ ಮೇಲಣ ಚಿತ್ರ' ಅವರ ಪ್ರಕಟಿತ ಕವನ ಸಂಗ್ರಹಗಳು.